ನಿಮ್ಮೊಡನೆ

# ವಲಸೆ ಎಂಬ ಅನಿವಾರ್ಯದ ಬೇಗುದಿಗೆ ಕರುಳ ಕುಡಿಗಳ ಭವಿಷ್ಯ ಕಮರಿತೇ?

> ವಲಸೆ ಕಾರ್ಮಿಕರ ಮಕ್ಕಳಿಗೆ ಕೆಲಸದಸ್ಥಳದ ಸನಿಹದಲ್ಲೇ ಶಾಲೆಗಳು ಇಲ್ಲದಿರುವುದು ಅವರು ಕಲಿಕೆಯಿಂದ ದೂರವಾಗಲು ಪ್ರಮುಖ ಕಾರಣ. ಇಂತಹ ಮಕ್ಕಳು ಕಲಿಕೆಯಿಂದ ವಂಚಿತವಾಗುವುದಷ್ಟೇ ಅಲ್ಲ, ಬೇರೆ ಬೇರೆ ಬಗೆಯ ಶೋಷಣೆಗೂ ಒಳಗಾಗುವ ಅಪಾಯವಿದೆ.

ಶಿಕ್ಷಣ ಎನ್ನುವುದು ಹಕ್ಕಾಗಿದೆ. ಅದನ್ನು ಪಡೆಯುವುದು ಕಡ್ಡಾಯಗೊಳಿಸಿದ್ದೇವೆ. ಮೇಲಾಗಿ ಉಚಿತವಾಗಿ ಪೂರೈಸಲು ಬಗೆಬಗೆಯ ಯೋಜನೆ–ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಇಷ್ಟಾಗಿಯೂ ಮಕ್ಕಳನ್ನು ಶಾಲೆಗಳಲ್ಲಿ ಉಳಿಸಿಕೊಳ್ಳಲು ಆಗುತ್ತಿಲ್ಲ! ಮಧ್ಯದಲ್ಲೇ ಶಾಲೆ ತೊರೆಯುವವರ ಸಂಖ್ಯೆ ಏರುತ್ತಿದೆ ಎಂಬುದು ಕಳವಳದ ವಿಚಾರ, ಚಿಂತಿಸಬೇಕಾದ ಸಂಗತಿ.

2018–19ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕದಲ್ಲಿ 70,116 ಮಕ್ಕಳು ಶಾಲೆ ತೊರೆದಿದ್ದಾರೆ. 2017–18ಕ್ಕೆ ಹೋಲಿಸಿದರೆ ಶಾಲೆಯಿಂದ ಹೊರಗೆ ಉಳಿದವರ ಸಂಖ್ಯೆಯಲ್ಲಿ ಸುಮಾರು ಐದು ಪಟ್ಟು ಹೆಚ್ಚಳವಾಗಿರುವುದು ನಮ್ಮ ಶಿಕ್ಷಣ ಇಲಾಖೆಯೇ ನಡೆಸಿದ ಸಮೀಕ್ಷೆಯಿಂದ ಹೊರಬಿದ್ದಿದೆ. ಅನಪೇಕ್ಷಿತವಾದ ಈ ಜಿಗಿತ ನಮ್ಮ ನೀತಿ ನಿರೂಪಕರ ಕಣ್ಣು ತೆರೆಸಬೇಕಾಗಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶ ಒಂದಿದೆ. ಶಾಲೆ ತೊರೆಯುವ ಪರಿಪಾಟ ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯಲ್ಲೇ ಹೆಚ್ಚಾಗಿದೆ. ಈ ಜಿಲ್ಲೆಯ ವ್ಯಾಪ್ತಿಯ 10,233 ಮಕ್ಕಳು ಶಾಲೆಯಿಂದ ದೂರವಾಗಿದ್ದಾರೆ. ಶಾಲೆ ತೊರೆಯುವ ಪ್ರವೃತ್ತಿ ಇಲ್ಲಿ ಹೆಚ್ಚಿಗೆ ಕಂಡುಬಂದಿರುವುದಕ್ಕೂ ವಲಸೆ ಎಂಬ ಮತ್ತೊಂದು ಗಂಭೀರ ಸಮಸ್ಯೆಗೂ ನಂಟು ಇರುವ ಸ್ಪಷ್ಟ ಸಾಧ್ಯತೆಗಳು ಗೋಚರಿಸುತ್ತವೆ.

ನಮ್ಮ ಗ್ರಾಮೀಣ ಅರ್ಥವ್ಯವಸ್ಥೆ ಮಕಾಡೆ ಮಲಗಿದೆ. ಅಲ್ಲಿ, ಹೊಸ ಬಗೆಯ ಉದ್ಯೋಗ ಸೃಷ್ಟಿಯ ಚೈತನ್ಯವೇ ಉಡುಗಿದೆ. ಇದರ ಪರಿಣಾಮವೇ ಆಂತರಿಕ ವಲಸೆ. ಗ್ರಾಮೀಣ ಪ್ರದೇಶಗಳ ಜನರು ದುಡಿಮೆ ಅರಸಿ ನಗರಗಳತ್ತ ಮುಖ ಮಾಡಿದ್ದಾರೆ. ಹೊಟ್ಟೆ ಹೊರೆಯಲು ಅನಿವಾರ್ಯವಾದ ವಲಸೆಯೆಂಬ ಈ ಬೇಗುದಿ, ಕರುಳ ಕುಡಿಗಳ ಭವಿಷ್ಯದ ಜೊತೆ ಈ ರೂಪದಲ್ಲಿ ಚೆಲ್ಲಾಟ ಆಡತೊಡಗಿದೆ. ವಲಸೆ ಕಾರ್ಮಿಕರ ಮಕ್ಕಳಿಗೆ ಕೆಲಸಸ್ಥಳದ ಸನಿಹದಲ್ಲೇ ಶಾಲೆಗಳು ಇಲ್ಲದಿರುವುದು ಅವರು ಕಲಿಕೆಯಿಂದ ದೂರವಾಗಲು ಪ್ರಮುಖ ಕಾರಣ. ಯುನೆಸ್ಕೊ ಅಧ್ಯಯನ ವರದಿಯಲ್ಲೂ ಈ ಕುರಿತು ಉಲ್ಲೇಖವಿದೆ. ಇಂತಹ ಮಕ್ಕಳು ಕಲಿಕೆಯಿಂದ ವಂಚಿತವಾಗುವುದಷ್ಟೇ ಅಲ್ಲ, ಬೇರೆ ಬೇರೆ ಬಗೆಯ ಶೋಷಣೆಗೂ ಒಳಗಾಗುವ ಅಪಾಯವಿದೆ.

ಈ ಬಗೆಯ ವಲಸೆ ತಡೆಯುವ ಮಾರ್ಗಗಳನ್ನು ನಾವು ಶೋಧಿಸಬೇಕಾಗಿದೆ. ಇಲ್ಲವಾದಲ್ಲಿ ಮುಂದೆ ಇದು ಇನ್ನಷ್ಟು ಗಂಭೀರ ಸ್ವರೂಪದ ಸಮಸ್ಯೆಗಳಿಗೆ ಕಾರಣವಾಗುವ ಅಪಾಯ ಇದೆ. ನಮ್ಮಲ್ಲಿ ಮಳೆಯಾಶ್ರಿತ ಬೇಸಾಯವೇ ಹೆಚ್ಚು. ಈ ವಿಚಾರದಲ್ಲಿ ರಾಜಸ್ಥಾನ ನಂತರದ ಸ್ಥಾನ ಕರ್ನಾಟಕದ್ದು. ಅದರಲ್ಲೂ ರಾಜ್ಯದ ಒಟ್ಟು ಕೃಷಿ ಯೋಗ್ಯ ಭೂಮಿಯಲ್ಲಿ ಶೇ. 16ರಷ್ಟು ಜಮೀನು ಬೇರೆ ಬೇರೆ ಕಾರಣಗಳಿಂದ ಬೀಳು ಬಿದ್ದಿರುತ್ತದೆ. ಇಂತಹ ಬೀಳು ಭೂಮಿಯ ಸದ್ಬಳಕೆಗೆ ಕಾರ್ಯಸಾಧ್ಯವಾದ ಯೋಜನೆಗಳನ್ನು ರೂಪಿಸಿದರೆ ಅಲ್ಲಿ ಒಂದಷ್ಟು ಹೊಸ ಉದ್ಯೋಗಗಳು ಸೃಷ್ಟಿಯಾಗಬಹುದು.

ಬೇಸಾಯ ಕ್ರಮಗಳನ್ನು ಈಗಿನ ಸ್ವರೂಪದಲ್ಲೇ ಉಳಿಸಿಕೊಂಡರೆ, ಅದರಿಂದ ಗ್ರಾಮೀಣ ಅರ್ಥವ್ಯವಸ್ಥೆಗೆ ಯಾವ ಪ್ರಯೋಜನವೂ ಆಗದು. ವ್ಯವಸಾಯೇತರ ಉದ್ಯೋಗ ಸೃಷ್ಟಿ ದೊಡ್ಡಮಟ್ಟದಲ್ಲಿ ಸಾಧ್ಯವಾದರೆ ಮಾತ್ರ, ಗ್ರಾಮೀಣ ಬದುಕು ಬಲ ಪಡೆಯಬಹುದು ಮತ್ತು ವಲಸೆಯಂತಹ ಸಮಸ್ಯೆಗಳು ನಿವಾರಣೆಯಾಗಬಹುದು. ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಬೇಕು. ಅಲ್ಲಿನ ಭೌಗೋಳಿಕ ಸ್ವರೂಪ, ಮಳೆ ಪ್ರಮಾಣ, ಬೆಳೆ ಪದ್ಧತಿ, ಮಾನವ ಸಂಪನ್ಮೂಲದ ಲಭ್ಯತೆ... ಇವುಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಉದ್ಯೋಗ ಸೃಷ್ಟಿಗೆ, ಉದ್ಯಮಶೀಲತೆಗೆ ಕಸುವು ತುಂಬಿದರೆ ಹಳ್ಳಿಗಳು ಜೀವಂತಿಕೆ ಪಡೆಯಬಹುದು. ಆಹಾರ ಉತ್ಪನ್ನಗಳ ಸಂಸ್ಕರಣೆಗೆ ಇರುವ ವಿಪುಲ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡರೆ ಗ್ರಾಮೀಣ ಯುವತಿ–ಯುವಕರ ಕೈಗಳಿಗೆ ಅವರು ಹುಟ್ಟಿ–ಬೆಳೆದ ಪರಿಸರದಲ್ಲೇ ಕೆಲಸ ಕೊಡಬಹುದು. ಅವರು ಬೇರು ಕತ್ತರಿಸಿಕೊಂಡು ನಗರಗಳತ್ತ ದೌಡಾಯಿಸುವುದನ್ನು ತಪ್ಪಿಸಬಹುದು.

ಆದರೆ ಇಂತಹ ದೂರದೃಷ್ಟಿಯ ಕಾರ್ಯಕ್ರಮಗಳು ನಮ್ಮ ಸರ್ಕಾರಗಳಿಗೆ ಬೇಡವಾಗಿವೆ. ವೋಟಿನ ಫಸಲು ತೆಗೆಯಲು ಅನುವಾಗಿಸುವ ರೈತರ ಸಾಲ ಮನ್ನಾ, ಸಣ್ಣ ಹಿಡುವಳಿದಾರರಿಗೆ ವರ್ಷಕ್ಕೆ 6000 ರೂಪಾಯಿ 'ಉಡುಗೊರೆ'ಯಂತಹ ಗಿಲೀಟು ಘೋಷಣೆಗಳೇ ಅವರಿಗೆ ಹೆಚ್ಚು ಪ್ರಿಯ. ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸುವ ಮೂಲಕ ನಮ್ಮ ಹಲವಾರು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡಬಹುದು ಎಂಬ ವಿವೇಕವನ್ನು ಆಳುವ ವರ್ಗಕ್ಕೆ ಮೂಡಿಸುವ ಪ್ರಯತ್ನಗಳು ಕೂಡ ಬೇರೆ ಬೇರೆ ಹಂತಗಳಲ್ಲಿ ಆಗಬೇಕಾಗಿದೆ. ಹಳ್ಳಿ ಬದುಕು ಹಸನಾದರಷ್ಟೇ ನಗರಗಳ ಬದುಕು ಸಹನೀಯವಾಗಲಿದೆ.

**■ ಎನ್. ಉದಯಕುಮಾರ್**



ಈಶ್ವರ